ಮುಂದೂಡಿತು. ಆದಾಗ್ಯೂ ಸಾಕಷ್ಟು ಸಿದ್ಧತೆಗಳೊಂದಿಗೆ ನಿರ್ದೇಶನಕ್ಕಿಳಿದರು ಸಿಂಧು.

‘ನನ್ನ ಕಡೆಯಿಂದ ಸಿನಿಮಾಗೆ ಏನೇನು ಸಿದ್ಧತೆ ಬೇಕೋ ಅದನ್ನು ಮಾಡುತ್ತಲೇ ಇದ್ದೆ. ನಿರ್ದಿಷ್ಟ ದೃಶ್ಯಗಳನ್ನು ಹೇಗೆ ಶೂಟ್ ಮಾಡಬೇಕು, ಏನೇನು ಶಾಟ್ಸ್ ಹಾಕಬೇಕು ಎಂದು ನಾನು, ನಮ್ಮ ತಂಡ ಯೋಜನೆ ರೂಪಿಸಿಕೊಂಡಿದ್ದೆವು. 30–45 ದಿವಸ ಪ್ರಿಪ್ರೊಡಕ್ಷನ್ ಕೆಲಸ ಮಾಡಿದ್ದೆವು. ದಿನದಿನ ಏನು ಶೂಟ್ ಮಾಡಬೇಕು ಎಂಬುದರ ಬಗ್ಗೆ ಸ್ಪಷ್ಟತೆ ಇಟ್ಟುಕೊಂಡಿದ್ದೆವು. ಈ ಸಿನಿಮಾದಲ್ಲಿ ನಟನೆ–ನಿರ್ದೇಶನ ಎರಡೂ ಜವಾಬ್ದಾರಿ ನನ್ನದಾದ್ದರಿಂದ ಯಾವುದೇ ಗೊಂದಲ ಆಗಬಾರದು, ಶೆಡ್ಯೂಲ್ ಹಿಂದೆ ಬೀಳಬಾರದು ಎಂದು ಎಲ್ಲವನ್ನೂ ವ್ಯವಸ್ಥಿತವಾಗಿ ಮಾಡಿದೆವು’ ಎಂದು ಸಿನಿಮಾ ತಯಾರಿ ಕುರಿತು ವಿವರಿಸುತ್ತಾರೆ.

‘ನನ್ನ ಅದೃಷ್ಟ ಎಂಬಂತೆ ಮೊದಲ ಸಿನಿಮಾಗೇ ಒಳ್ಳೆ ಪ್ರೊಡಕ್ಷನ್ ಹೌಸ್ ಸಿಕ್ಕಿತು. ಇಡೀ ತಂಡ, ನಾನು ನಟನೆ–ನಿರ್ದೇಶನ ಎರಡರಲ್ಲೂ ಇದ್ದೇನೆ ಎಂದು ಬೆನ್ನಿಗೆ ನಿಂತಿತು. ಸವಾಲುಗಳನ್ನು ಸುಲಭ ಮಾಡಿಸಿತು’ ಎಂದು ತಂಡದ ಬೆಂಬಲವನ್ನು ನೆನಪಿಸಿಕೊಳ್ಳುತ್ತಾರೆ. ಇವೆಲ್ಲದರ ಫಲವಾಗಿ ಇದೇ ಜುಲೈ 28ಕ್ಕೆ ‘ಆಚಾರ್ & ಕೋ’ ಸಿನಿಮಾ ತೆರೆಗೆ ಬರುತ್ತಿದೆ.

ಹಳೆಯ ಬೆಂಗಳೂರನ್ನು, ಅದರಲ್ಲಿನ ಕುಟುಂಬದ ಕಥನವೊಂದನ್ನು ಭಾವನಾತ್ಮಕ ಹಾಗೂ ಹಾಸ್ಯದ ಧಾಟಿಯಲ್ಲಿ ಕಟ್ಟಿಕೊಟ್ಟಿರುವುದಾಗಿ ಹೇಳುತ್ತಾರೆ ಸಿಂಧು. ಇದರೊಂದಿಗೆ, ಸಿನಿಮಾದ ಬಹುಪಾಲು ವಿಭಾಗಗಳಲ್ಲಿ ಮಹಿಳೆಯರೇ ಇರುವುದು ಮತ್ತೊಂದು ವೈಶಿಷ್ಟ. ಇದಕ್ಕೆ ಕಾರಣವನ್ನೂ ನೀಡುತ್ತಾರೆ ಅವರು:

‘60ನೇ ದಶಕದ ಕಥೆ ಈ ಸಿನಿಮಾ ತಿರುಳು. ಆಗ ಬೆಂಗಳೂರಿನಲ್ಲಿ ಕೈಗಾರಿಕೀಕರಣ ಆರಂಭವಾಗಿತ್ತು. ಬ್ಯಾಂಕ್‌ಗಳು ನ್ಯಾಷನಲೈಸೇಷನ್ ಆಗುತ್ತಿದ್ದವು. ಹೆಣ್ಣು ಮಕ್ಕಳು ಶಿಕ್ಷಣ ಹಾಗೂ ಕೆಲಸವನ್ನು ಗಂಭೀರವಾಗಿ ತೆಗೆದುಕೊಳ್ಳಲು ಆರಂಭಿಸಿದ್ದ ಕಾಲವದು. ಮನೆಯಲ್ಲಿ ಕೂಡ ಹೆಣ್ಣುಮಕ್ಕಳ ಶಿಕ್ಷಣ–ವೃತ್ತಿ ಕುರಿತ ಮನೋಭಾವ ಬದಲಾಗುತ್ತಿತ್ತು. ಇದನ್ನು ಮಹಿಳಾ ಸಬಲೀಕರಣ ಎಂದು ನಾವು ಕರೆಯುತ್ತೇವೆ. ಈ ಪರಿಕಲ್ಪನೆಯನ್ನು ಸಿನಿಮಾ ಮಾಡುತ್ತಿರುವಾಗ, ಅದನ್ನು ನಿಜ ಅರ್ಥದಲ್ಲಿ ಅಳವಡಿಸಿಕೊಳ್ಳುವುದೂ ಮುಖ್ಯವಲ್ಲವೇ ಎಂದು ಅನಿಸಿತು. ಸಿನಿಮಾ ಕ್ಷೇತ್ರದಲ್ಲೂ ಮಹಿಳಾ ತಂತ್ರಜ್ಞರು ಬೆರಳೆಣಿಕೆಯಷ್ಟು. ಪುರುಷ ಸಿಬ್ಬಂದಿಯೇ ಹೆಚ್ಚು. ಇಂಥ ಪರಿಕಲ್ಪನೆಯ ಸಿನಿಮಾ ಮಾಡುತ್ತಿದ್ದೇವೆ ಎಂದಾದರೆ, ಸಿನಿಮಾ ಕಟ್ಟುವಲ್ಲೂ ಹೆಚ್ಚು ಮಹಿಳೆಯರನ್ನೇ ಒಳಗೊಳ್ಳಬೇಕು ಎಂಬ ಆಶಯ ಹುಟ್ಟಿಕೊಂಡಿತು. ಅದು ಸಿನಿಮಾ ಕಥೆಗೆ ಒಂದು ತೂಕವೂ ಹೌದು’.

‘ಕಿತ್ತಾಟ, ಹಿಂಸೆ, ರೊಮಾನ್ಸ್ ಹೀಗೆ ಸಿದ್ಧ ಮಾದರಿಯ ಚಿತ್ರಗಳೇ ಹೆಚ್ಚಿವೆ. ಇವುಗಳನ್ನು ಮೀರಿ, ಒಂದು ಕುಟುಂಬದ ಚಿತ್ರವನ್ನು ಸುಂದರವಾಗಿ ಕಟ್ಟಿಕೊಡುವ ಸಣ್ಣ ಪ್ರಯತ್ನ ನನ್ನದು. ಇದು ಎಲ್ಲರಿಗೂ ಇಷ್ಟವಾಗುವ ನಿರೀಕ್ಷೆಯಿದೆ’ ಎಂದು ಭರವಸೆ ವ್ಯಕ್ತಪಡಿಸುತ್ತಾರೆ.

ಕನ್ನಡ ಸಿನಿಮಾರಂಗದಲ್ಲಿ ನಟನೆ–ನಿರ್ದೇಶನ ಎರಡೂ ಹಾದಿಯಲ್ಲಿ ಸಾಗುವ ಮಹದಾಸೆ ಅವರದ್ದು. ಈ ಮಹದಾಸೆಯನ್ನು ‘ಆಚಾರ್ & ಕೋ’ ಸಿನಿಮಾ ಗಟ್ಟಿ ಮಾಡುತ್ತದೆಂಬ ವಿಶ್ವಾಸದಲ್ಲಿದ್ದಾರೆ ಸಿಂಧು.



# ರಂಜನಿ ಹೊಸ ಪಥ

‘ಕನ್ನಡತಿ’ ಧಾರಾವಾಹಿ ನಂತರ ಸಿನಿಮಾರಂಗದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕೆಂದು ಬಯಸಿರುವ ನಟಿ ರಂಜನಿ ರಾಘವನ್, ಇದೀಗ ಕನ್ನಡದ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾವೊಂದಕ್ಕೆ ಅಣಿಯಾಗುತ್ತಿದ್ದಾರೆ.

‘ಡೆಡ್ಲಿ ಸೋಮ’ ಖ್ಯಾತಿಯ ನಟ ಆದಿತ್ಯ ಜೊತೆಗೆ ಮನೋವೈದ್ಯೆಯ ಪಾತ್ರಕ್ಕೆ ಬಣ್ಣ ಹಚ್ಚಲಿದ್ದಾರೆ. ಕಿರುತೆರೆಯಿಂದ ಮರಳಿರುವ ಅವರು ಸದ್ಯ ಸಿನಿಮಾರಂಗದಲ್ಲಿ ಕ್ರಿಯಾಶೀಲವಾಗುವುದಾಗಿ ಹೇಳಿದ್ದಾರೆ.

‘ಕಿರುತೆರೆಯಲ್ಲಿ ಸಂಪೂರ್ಣ ತೊಡಗಿಕೊಂಡಿದ್ದರಿಂದ ಸಿನಿಮಾಗಳೆಡೆಗೆ ಬರಲು ಆಗಿರಲಿಲ್ಲ. ಡೇಟ್‌ಗಳನ್ನು ಹೊಂದಿಸುವುದೇ ಸಾಧ್ಯವಾಗುತ್ತಿರಲಿಲ್ಲ. ಆದರೆ ಈಗ ಸಿನಿಮಾಗಳಲ್ಲಿಯೇ ಕೆಲಸ ಮಾಡಬೇಕೆಂದುಕೊಂಡಿದ್ದೇನೆ. ದಿನಗಟ್ಟಲೆ ನಿರಂತರ ಶೂಟಿಂಗ್ ಕಿರುತೆರೆಯ ಒಂದು ಭಾಗ ಹಾಗೂ ಅದನ್ನು ನಾವು ಒಪ್ಪಲೇಬೇಕು. ಪ್ರತಿದಿನವೂ ಹೊಸತು ನೀಡಬೇಕು. ಹೀಗಾಗಿ ಅಲ್ಲಿ ಗ್ಯಾಪ್ ಸಿಗುವುದಿಲ್ಲ’ ಎಂದಿದ್ದಾರೆ.

‘ಸದ್ಯಕ್ಕೆ ನನ್ನ ಆದ್ಯತೆ ಕ್ರಿಯಾಶೀಲತೆಯ ವಲಯದಲ್ಲಿ ನನ್ನನ್ನು ನಾನಿಟ್ಟುಕೊಳ್ಳುವುದು. ಈ ಹೊಸ ಸಿನಿಮಾಗೂ ಅದೇ ಆದ್ಯತೆಯೊಂದಿಗೆ ಒಪ್ಪಿದ್ದೇನೆ. ಪರಿಸ್ಥಿತಿಗೆ ತಕ್ಕಂತೆ ನನ್ನ ಪಾತ್ರ ಹೇಗೆ ತನ್ನ ಪಥವನ್ನು ಬದಲಾಯಿಸುತ್ತಾ ಹೋಗುತ್ತದೆ ಎಂಬ ಕಾರಣವೇ ನನ್ನನ್ನು ಈ ಪಾತ್ರ ಆಯ್ಕೆ ಮಾಡಿಕೊಳ್ಳುವಂತೆ ಮಾಡಿತು’ ಎಂದು ತಮ್ಮ ಪಾತ್ರದ ಬಗ್ಗೆ ವಿವರಣೆ ನೀಡಿದ್ದಾರೆ.

ಕಿರುತೆರೆಯಿಂದ ಸಿನಿಮಾದೆಡೆಗೆ ಬರುವ ದಾರಿ ಹಾಗೂ ಅದರಲ್ಲಿನ ಯಶಸ್ಸಿನ ಕುರಿತೂ ಮಾತನಾಡಿದ್ದಾರೆ ರಂಜನಿ. ‘ಕಿರುತೆರೆಯ ಜನಪ್ರಿಯತೆ ಹೊರತಾಗಿಯೂ ಕಲಾವಿದರಿಗೆ ಸಿನಿಮಾ ಹಾದಿ ಸುಲಭವಾಗಿರುವುದಿಲ್ಲ. ಟೀವಿಯಿಂದ ಸಿನಿಮಾಗೆ ಹೋಗುವ ಎಲ್ಲ ಕಲಾವಿದರಿಗೂ ಯಶಸ್ಸು ಸಿಕ್ಕಿಬಿಡುವುದಿಲ್ಲ. ಈಗ ಸಿನಿಮಾದಲ್ಲಿ ನನ್ನ ಗುರುತು ಮೂಡಿಸುವ ಪ್ರಯತ್ನದಲ್ಲಿದ್ದೇನೆ. ಒಂದೇ ರೀತಿಯ, ಕ್ಲೀಷೆಯ ಕಥೆಯುಳ್ಳ ಆಫರ್‌ಗಳನ್ನು ತಿರಸ್ಕರಿಸುತ್ತಿದ್ದೇನೆ. ಈ ಕಾಯುವಿಕೆ ನನಗೆ ದೊಡ್ಡ ಕೊಡುಗೆ ನೀಡುವ ಭರವಸೆ ಇದೆ’ ಎಂದಿದ್ದಾರೆ.

‘ಕಿರುತೆರೆಯಲ್ಲಿ ಪಾತ್ರಗಳು ಅತ್ಯುತ್ತಮ ರೀತಿ ಆರಂಭವಾಗುತ್ತವೆ ಮತ್ತು ತಮ್ಮ ನಿರ್ದಿಷ್ಟ ನೋಡುಗರನ್ನು ತಲುಪುತ್ತವೆ. ಆದರೆ ಒಂದು ಹಂತದ ನಂತರ ಆ ಪಾತ್ರಗಳು ಕೂಡ ಒಂದೇ ಧಾಟಿಯಲ್ಲಿ ಸಾಗುತ್ತಾ ಸಾಗುತ್ತಾ ಏಕತಾನತೆ ಸೃಷ್ಟಿಸಿಬಿಡುತ್ತವೆ. ಲೇಖಕರಿಗೂ ಕೆಲವು ಸವಾಲು ಹಾಗೂ ಮಿತಿಗಳಿರುತ್ತವೆ’ ಎಂದು ಕಿರುತೆರೆಯ ಸವಾಲುಗಳ ಕುರಿತು ಮಾತನಾಡಿದ್ದಾರೆ.